ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

**ಸಂಖ್ಯೆ : ವಾಇ : ಜ ನಿ : ಸುಮಪ : 2020–21** **ದಿನಾಂಕ : 13–08–2020**

**ಪತ್ರಿಕಾ ಆಮಂತ್ರಣ**

**ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷರಾಗಿ ಅಧಿಕಾರ ಸ್ವೀಕಾರ**

ವಿಧಾನಸಭಾ ಸದಸ್ಯರಾದ ಅರಗ ಜ್ಞಾನೇಂದ್ರ ಇವರಿಂದ

ದಿನಾಂಕ: 14–08–2020 ಸಮಯ: ಬೆಳಿಗ್ಗೆ 10.00 ಗಂಟೆಗೆ

ಸ್ಥಳ : ಕರ್ನಾಟಕ ಗೃಹ ಮಂಡಳಿ, 3 ಮತ್ತು 4ನೇ ಮಹಡಿ,

ಕಾವೇರಿ ಭವನ, ಕೆಂಪೇಗೌಡ ರಸ್ತೆ, ಬೆಂಗಳೂರು

# ಪತ್ರಿಕಾ ಪ್ರಕಟಣೆ

## ಸಚಿವರ ಪ್ರವಾಸ

**ಬೆಂಗಳೂರು, ಆಗಸ್ಟ್ 13 (ಕರ್ನಾಟಕ ವಾರ್ತೆ)**

**ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಸಾರ್ವಜನಿಕ ಉದ್ದಿಮೆ ಸಚಿವರು ಹಾಗೂ, ಧಾರವಾಡ ಉಸ್ತುವಾರಿ ಸಚಿವ ಜಗದೀಶ ಶೆಟ್ಟರ್ ಅವರು ಆಗಸ್ಟ್ 14ರ ಶುಕ್ರವಾರ ಗದಗ ಹಾಗೂ ಧಾರವಾಡ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಳ್ಳುವರೆಂದು ಅಧಿಕೃತ ಪ್ರಕಟಣೆ ತಿಳಿಸಿದೆ.**

## ಸಚಿವರ ಪ್ರವಾಸ

**ಬೆಂಗಳೂರು, ಆಗಸ್ಟ್ 13 (ಕರ್ನಾಟಕ ವಾರ್ತೆ)**

**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು ಹಾಗೂ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವ ಎಸ್. ಸುರೇಶ್‌ಕುಮಾರ್ ಅವರು ಆಗಸ್ಟ್ 14 ಹಾಗೂ 15 ರಂದು ಚಾಮರಾಜನಗರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಆಗಸ್ಟ್ 15 ರಂದು ಕೇಂದ್ರಸ್ಥಾನಕ್ಕೆ ಹಿಂದಿರುಗುವರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.**

## ಸಚಿವರ ಪ್ರವಾಸ

**ಬೆಂಗಳೂರು, ಆಗಸ್ಟ್ 13 (ಕರ್ನಾಟಕ ವಾರ್ತೆ) :**

**ವಸತಿ ಸಚಿವರು ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ವಿ. ಸೋಮಣ್ಣ ಅವರು ಆಗಸ್ಟ್ 14 ಹಾಗೂ 15 ರಂದು ಕೊಡಗು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಅಗಸ್ಟ್ 15 ರಂದು ಕೇಂದ್ರ ಸ್ಥಾನಕ್ಕೆ ಹಿಂದಿರುಗುವರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.**

### ಅಧಿಕಾರ ಸ್ವೀಕಾರ

**ಬೆಂಗಳೂರು, ಆಗಸ್ಟ್ 13 (ಕರ್ನಾಟಕ ವಾರ್ತೆ) :**

ವಿಧಾನಸಭಾ ಸದಸ್ಯರಾದ ಅರಗ ಜ್ಞಾನೇಂದ್ರ ಅವರು **ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷರಾಗಿ** ದಿನಾಂಕ: 14-08-2020, ಬೆಳಿಗ್ಗೆ 10.00 ಗಂಟೆಗೆ ಕರ್ನಾಟಕ ಗೃಹ ಮಂಡಳಿ, 3 ಮತ್ತು 4ನೇ ಮಹಡಿ, ಕಾವೇರಿ ಭವನ, ಕೆಂಪೇಗೌಡ ರಸ್ತೆ, ಬೆಂಗಳೂರು ಇಲ್ಲಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಅರ್ಜಿ ಆಹ್ವಾನ

## ಬೆಂಗಳೂರು, ಆಗಸ್ಟ್ 13 (ಕರ್ನಾಟಕ ವಾರ್ತೆ) :

ಪ್ರಸಕ್ತ ಸಾಲಿನಲ್ಲಿ ಉಪ್ಪಾರ ಮತ್ತು ಅದರ ಉಪಜಾತಿಗಳ ಜನರ ಆರ್ಥಿಕ ಅಭಿವೃದ್ಧಿಗಾಗಿ ಸ್ವಯಂ ಉದ್ಯೋಗ ಸಾಲ ಯೋಜನೆ ಮತ್ತು ಅರಿವು ಶೈಕ್ಷಣಿಕ ಸಾಲ ಯೋಜನೆಗಳಲ್ಲಿ ಸಾಲ ಮತ್ತು ಸಹಾಯಧನದ ಸೌಲಭ್ಯ ಪಡಯಲು ಅರ್ಜಿ ಆಹ್ವಾನಿಸಲಾಗಿದೆ.

ಸೌಲಭ್ಯ ಪಡೆಯಲು ಇಚ್ಚಿಸುವವರು ಅರ್ಜಿ ನಮೂನೆಗಳನ್ನು ಜಿಲ್ಲಾ ಕಛೇರಿಯಲ್ಲಿ ಅಥವಾ ನಿಗಮದ ವೆಬ್‌ಸೈಟ್‌ನಲ್ಲಿ ಪಡೆದು, ಅರ್ಜಿಯೊಂದಿಗೆ ಜಾತಿ, ಆದಾಯ ಪ್ರಮಾಣ ಪತ್ರ, ಆಧಾರ್ ಕಾರ್ಡ್, ಫೋಟೋ ಹಾಗೂ ಇತರೆ ದಾಖಲಾತಿಗಳನ್ನು ವೆಬ್‌ಸೈಟ್ www.dbcdc.karnataka.gov.in ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕು.

ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಸಾಧ್ಯವಾಗದೇ ಇದ್ದಲ್ಲಿ ಅಗತ್ಯ ದಾಖಲೆಗಳೊಂದಿಗೆ ಭರ್ತಿ ಮಾಡಿದ ಅರ್ಜಿಯನ್ನು ಸೆಪ್ಟೆಂಬರ್ 5 ರೊಳಗೆ ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಉತ್ತರ ಜಿಲ್ಲೆ, ಸಂಖ್ಯೆ : 324/62, ಸರ್ವಶೀಲಾ ಕಾಂಪ್ಲೆಕ್ಸ್, ಬಳ್ಳಾರಿ ಮುಖ್ಯರಸ್ತೆ, ಗಂಗಾನಗರ, ಬೆಂಗಳೂರು-560032 ಇವರಿಗೆ ಸಲ್ಲಿಸಬೇಕು.

ಸದರಿ ಸಮುದಾಯದವರು ಈ ಹಿಂದೆ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಹಾಗೂ ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮದಿಂದ ಯಾವುದಾದರೂ ಯೋಜನೆಯಡಿ ಸಾಲ ಸೌಲಭ್ಯ ಪಡದಿದ್ದರೆ ಅಂತಹವರು ಹಾಗೂ ಅವರ ಕುಟುಂಬದವರು ಮತ್ತೊಮ್ಮೆ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ನಿಗಮದ ವೆಬ್‌ಸೈಟ್, ಜಿಲ್ಲಾ ಕಛೇರಿ ಅಥವಾ ದೂರವಾಣಿ ಸಂಖ್ಯೆ : 080-23539600 ನ್ನು ಸಂಪರ್ಕಿಸಬಹುದು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಇಲಾಖಾ ಪರೀಕ್ಷೆ

ಬೆಂಗಳೂರು, ಆಗಸ್ಟ್ 13 (ಕರ್ನಾಟಕ ವಾರ್ತೆ) : ಕರ್ನಾಟಕ ಲೋಕಸೇವಾ ಆಯೋಗವು 2020ನೇ ಸಾಲಿನ ಪ್ರಥಮ ಅಧಿವೇಶನದ ಇಲಾಖಾ ಪರೀಕ್ಷೆಗಳನ್ನು ನಡೆಸಲಿದ್ದು, ಆಗಸ್ಟ್ 18 ರಿಂದ 20ರ ವರೆಗೆ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ನಡೆಯಲಿದೆ.

ಆಗಸ್ಟ್ 26 ರಿಂದ ಸೆಪ್ಟೆಂಬರ್ 07ರ ವರೆಗೆ ಬೆಂಗಳೂರು, ಬೆಳಗಾವಿ, ಕಲಬುರುಗಿ, ಮೈಸೂರು, ಶಿವಮೊಗ್ಗ ಕೇಂದ್ರಗಳಲ್ಲಿ ಹಾಗೂ ಸೆಪ್ಟೆಂಬರ್ 09 ರಿಂದ 16ರ ವರೆಗೆ ಬೆಂಗಳೂರು ಕೇಂದ್ರದಲ್ಲಿ ನಡೆಯಲಿದೆ.

ಇಲಾಖಾ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸಿರುವ ಅರ್ಹ ಅಭ್ಯರ್ಥಿಗಳು ಪ್ರವೇಶ ಪತ್ರಗಳನ್ನು ಆಯೋಗದ ವೆಬ್‌ಸೈಟ್ "http://kpsc.kar.nic.in" ನಲ್ಲಿ ಪ್ರಕಟಿಸಲಾಗಿದೆ. ಅಭ್ಯರ್ಥಿಗಳು ಇಂದಿನಿಂದಲೇ ಪ್ರವೇಶ ಪತ್ರಗಳನ್ನು ಮತ್ತು ಅಭ್ಯರ್ಥಿಗಳ ಸೂಚನೆಗಳ ಪ್ರತಿಯನ್ನು ಕಡ್ಡಾಯವಾಗಿ ಡೌನ್‌ಲೋಡ್ ಮಾಡಿಕೊಳ್ಳಲು ಪ್ರಕಟಣೆ ತಿಳಿಸಿದೆ

## ಕ್ರೀಡಾಪಟುಗಳ ಸ್ವಯಂ ಉದ್ಯೋಗದ ಸಹಾಯಧನಕ್ಕಾಗಿ ಅರ್ಜಿ ಆಹ್ವಾನ

ಬೆಂಗಳೂರು, ಆಗಸ್ಟ್ 13 (ಕರ್ನಾಟಕ ವಾರ್ತೆ) : ಪ್ರಸಕ್ತ ಸಾಲಿನ ವಿಶೇಷ ಘಟಕ ಉಪಯೋಜನೆ ಹಾಗೂ ಗಿರಿಜನ ಉಪಯೋಜನೆ ಅಡಿಯಲ್ಲಿ 2019ನೇ ಕ್ಯಾಲೆಂಡರ್ ವರ್ಷದಲ್ಲಿ ಅಂತರಾಷ್ಟ್ರೀಯ, ರಾಷ್ಟ್ರೀಯ ಮಟ್ಟದ ಅಧಕೃತ ಕ್ರೀಡಾಕೂಟಗಳಲ್ಲಿ ಪದಕ ವಿಜೇತರಾದ ಪರಿಶಿಷ್ಟ ಜಾತಿ ಮತ್ತು ಪಂಗಡದ ಕ್ರೀಡಾಪಟುಗಳಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಜಿಮ್ ಸ್ಥಾಪನೆಗಾಗಿ ಸಹಾಯಧನ ನೀಡಲು ಆನ್‍ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿದೆ.

ಅರ್ಜಿಗಳನ್ನು ಆನ್‍ಲೈನ್‍ನಲ್ಲಿ ಸಲ್ಲಿಸಲು ಸೆಪ್ಟೆಂಬರ್ 10 ಕೊನೆಯ ದಿನವಾಗಿದ್ದು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಜಿಲ್ಲೆಯ ಉಪನಿರ್ದೇಶಕರು ಅಥವಾ ಸಹಾಯಕ ನಿರ್ದೇಶಕರಿಂದ ದೃಢೀಕರಿಸಿ http//karunadu.karnataka.gov.in/dyes ವೆಬ್ ಸೈಟ್ ಮೂಲಕ ಅಪ್‍ಲೋಡ್ ಮಾಡಬಹುದು.

ಅರ್ಜಿಗಳನ್ನು ನೇರವಾಗಿ ಕೇಂದ್ರ ಕಛೇರಿಯಲ್ಲಿ ಸ್ವೀಕರಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ಆಯಾ ಜಿಲ್ಲೆಯ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಜಿಲ್ಲೆಯ ಉಪನಿರ್ದೇಶಕರು ಅಥವಾ ಸಹಾಯಕ ನಿರ್ದೇಶಕರ ಕಛೇರಿಯನ್ನು ಸಂಪರ್ಕಿಸಬಹುದು.

## ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿಗಳಿಗೆ/ ಸಂಸ್ಥೆಗಳ ರಾಜ್ಯ ಪ್ರಶಸ್ತಿಗೆ ಅರ್ಜಿ ಆಹ್ವಾನ

**ಬೆಂಗಳೂರು, ಆಗಸ್ಟ್ 13 (ಕರ್ನಾಟಕ ವಾರ್ತೆ) :**

**ಕರ್ನಾಟಕ ಸರ್ಕಾರವು ಮಕ್ಕಳ ದಿನಾಚರಣೆ ಕಾರ್ಯಕ್ರಮದಂದು ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಕನಿಷ್ಠ 5 ವರ್ಷ ಸೇವೆ ಸಲ್ಲಿಸಿದ ವ್ಯಕ್ತಿಗಳಿಗೆ ಮತ್ತು ಸಂಸ್ಥೆಗಳಿಗೆ ಪ್ರಶಸ್ತಿ ನೀಡಲು ಅರ್ಜಿಯನ್ನು ಆಹ್ವಾನಿಸಿದೆ.**

**ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಕನಿಷ್ಠ 5 ವರ್ಷಗಳ ಕಾಲ ಅತ್ಯುತ್ತಮ ಸೇವೆ ಸಲ್ಲಿಸಿದ ವ್ಯಕ್ತಿಗಳಿಗೆ ತಲಾ ರೂ.25000/-ಗಳ ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರ ಹಾಗೂ ಸಂಸ್ಥೆಗಳಿಗೆ ತಲಾ ರೂ. 1,00,000/- ನಗದು ಬಹುಮಾನ ಹಾಗೂ ಪ್ರಶಸ್ತಿ ಪತ್ರವನ್ನು ಮಕ್ಕಳ ದಿನಾಚರಣೆಯಂದು ಪ್ರಧಾನ ಮಾಡಲಾಗುವುದು.**

**2020ನೇ ಸಾಲಿನ ಪ್ರಶಸ್ತಿಗಾಗಿ ನಿಗದಿಪಡಿಸಿರುವ ಅರ್ಜಿ ನಮೂನೆಗಳನ್ನು ಸಂಬಂಧಿಸಿದ ಜಿಲ್ಲೆಯ ಉಪ ನಿರ್ದೇಶಕರು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಇವರಿಂದ ಪಡೆದು ಭರ್ತಿ ಮಾಡಿದ ಅರ್ಜಿಗಳನ್ನು ದ್ವಿಪ್ರತಿಯಲ್ಲಿ ಸಂಬಂಧಪಟ್ಟ ಜಿಲ್ಲೆಯ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರಿಗೆ ದಿನಾಂಕ ಸೆಪ್ಟಂಬರ್ 15 ರೊಳಗೆ ಸಲ್ಲಿಸಬೇಕು. ನಿಗದಿಪಡಿಸಿದ ದಿನಾಂಕದ ನಂತರ ಸಲ್ಲಿಸಿದ ಅರ್ಜಿಗಳನ್ನು ಯಾವುದೇ ಕಾರಣಕ್ಕೂ**

ಪರಿಗಣಿಸಲಾಗುವುದಿಲ್ಲ. ಅರ್ಜಿಗಳನ್ನು ಕನ್ನಡ ಭಾಷೆಯಲ್ಲಿ ಸಲ್ಲಿಸಬೇಕೆಂದು ಅಧಿಕೃತ ಪ್ರಕಟಣೆ ತಿಳಿಸಿದೆ.

# Invitation of applications for State Award for Individuals and Institutions in the field of Child Welfare

Bengaluru, 13th August(Karnataka Information):

Government of Karnataka confers award to individuals and Institutions who have worked for the welfare of children for more than 5 years for Childrens day

Individual award carries cash prize of Rs.25,000/- and a citation and Institutional award carries cash prize of Rs.1,00,000/- and citation.

The prescribed forms for the year 2020 may be obtained from the Deputy Director of Women and Child Development Department in the respective Districts. The filled applications should be submitted to the concerned District Deputy Director of Women and Child Development Department on or before 15-09-2020. The applications received after due date will not be considered. The applications should be submitted in kannada only says Official Press Release.

# ಗಲಭೆ ಪೀಡಿತ ಪ್ರದೇಶಗಳಿಗೆ ಕೇಂದ್ರ ಸಚಿವ ಸದಾನಂದ ಗೌಡ ಭೇಟಿ

# ದುಷ್ಕರ್ಮಿಗಳ ವಿರುದ್ಧ ಕಠಿಣ ಕ್ರಮಕ್ಕೆ ಸೂಚನೆ

**ಬೆಂಗಳೂರು, ಆಗಸ್ಟ್ 13 (ಕರ್ನಾಟಕ ವಾರ್ತೆ) :**

ಕೇಂದ್ರ ರಾಸಾಯನಿಕ ಮತ್ತ ರಸಗೊಬ್ಬರ ಸಚಿವ ಡಿ ವಿ ಸದಾನಂದ ಗೌಡ ಅವರು ಗಲಭೆ ಪೀಡಿತ ಬೆಂಗಳೂರಿನ ಡಿ ಜಿ. ಹಳ್ಳಿ ಮತ್ತು ಕೆ ಜಿ ಹಳ್ಳಿ ಪ್ರದೇಶಗಳಿಗೆ ಗೃಹ ಸಚಿವ ಶ್ರೀ ಬಸವರಾಜ್ ಬೊಮ್ಮಾಯಿ ಅವರೊಂದಿಗೆ ಭೇಟಿ ನೀಡಿ ಪೊಲೀಸರು ಹಾಗೂ ಸಂತ್ರಸ್ಥ ನಾಗರಿಕರಲ್ಲಿ ಸ್ಥೈರ್ಯ ತುಂಬಿದರು.

ಗಲಭೆಕೋರರು ಡಿ ಜಿ ಹಳ್ಳಿ ಪೊಲೀಸ್ ಠಾಣೆ, ಹತ್ತಾರು ಮನೆಗಳು, ಅಂಗಡಿಗಳು, ನೂರಾರು ವಾಹನಗಳಿಗೆ ಬೆಂಕಿಹಚ್ಚಿ ನಡೆಸಿರುವ ವಿಧ್ವಂಸ ಕೃತ್ಯಗಳಿಂದ ಆಸ್ತಿಪಾಸ್ತಿಗೆ ಆಗಿರುವ ಅಪಾರ ಪ್ರಮಾಣದ ಹಾನಿಯನ್ನು ಕಂಡು ಸಚಿವರು ಖೇದ ವ್ಯಕ್ತಪಡಿಸಿದರು. ಗಲಭೆಕೋರರ ಗುಂಪುಗಳು ಈ ಭಾಗದಲ್ಲಿ ಅಲ್ಪಸಂಖ್ಯಾತರಾಗಿರುವ ಹಿಂದುಗಳ ಮನೆಮುಂದೆ ನಿಲ್ಲಿಸಿರುವ ನೂರಾರು ಕಾರು-ಬೈಕುಗಳು, ಕೈಗಾಡಿಗಳನ್ನು ಸುಟ್ಟುಹಾಕಿವೆ. ಡಿ ಜಿ ಹಳ್ಳಿ ಪೊಲೀಸ್ ಠಾಣೆ, ಪೊಲೀಸ್ ವಾಹನಗಳಲ್ಲದೆ ಅನೇಕ ಹಿಂದುಗಳ ಮನೆಗಳಿಗೂ ಬೆಂಕಿಹಚ್ಚಿವೆ. ಕೆ. ಜಿ ಹಳ್ಳಿ. ಪೊಲೀಸ್ ಠಾಣೆ ಮೇಲೂ ದಾಳಿ ಮಾಡಿವೆ.

ಕೇಂದ್ರ ಸಚಿವ ಸದಾನಂದಗೌಡ ಅವರು ಎರಡೂ ಪೊಲೀಸ್ ಠಾಣೆಗಳಿಗೂ ಭೇಟಿ ನೀಡಿದರು. ಹಾಗೆಯೇ ಗಲಭೆ ಪೀಡಿತ ಬಿಜೆಪಿ ಕಾರ್ಯಕರ್ತರಾದ ಮುನೆಗೌಡ, ಅರುಣ ಮುಂತಾದವರ ಮನೆಗಳಿಗೆ ತೆರಳಿ ಸಾಂತ್ವನ ಹೇಳಿದರು. "ತಾವಿಲ್ಲಿ ಅಲ್ಪಸಂಖ್ಯಾತರಾಗಿದ್ದೇವೆ. ಅಸುರಕ್ಷಿತರಾಗಿದ್ದೇವೆ. ನಮ್ಮ ಜೀವಕ್ಕೆ ರಕ್ಷಣೆ ಬೇಕು. ಗಲಭೆಕೋರರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು. ಅವರನ್ನೆಲ್ಲ ತಕ್ಷಣ ಬಂಧಿಸಬೇಕು" ಎಂದು ಅನೇಕ ಸಂತ್ರಸ್ತ ಹಿಂದುಗಳು ವಿಶೇಷವಾಗಿ ಮಹಿಳೆಯರು ಸಚಿವರನ್ನು ವಿನಂತಿಸಿದರು. ಸಂತ್ರಸ್ತರಿಗೆ ಸೂಕ್ತ ಭದ್ರತೆಯನ್ನು ಒದಗಿಸುವಂತೆ ಸ್ಥಳದಲ್ಲಿದ್ದ ಹಿರಿಯ ಪೊಲೀಸ್ ಅಧಿಕಾರಿಗಳಿಗೆ ಸೂಚಿಸಿದರು. ಉಪಮುಖ್ಯಮಂತ್ರಿ ಡಾ ಅಶ್ವತ್ಥನಾರಾಯಣ ಅವರೂ ಜೊತೆಯಾದರು.

ಈ ಸಂದರ್ಭದಲ್ಲಿ ವರದಿಗಾರರೊಂದಿಗೆ ಮಾತನಾಡಿದ ಸದಾನಂದ ಗೌಡರು - ಪೊಲೀಸರು ಗಲಭೆಯನ್ನು ನಿಯಂತ್ರಿಸಲು ಸಂಯಮದಿಂದ ವರ್ತಿಸಿದ್ದಾರೆ. ಗಲಭೆಕೋರರು ವಾಹನ, ಮನೆಗಳಿಗೆ ಬೆಂಕಿಹಚ್ಚುವುದನ್ನು ಮುಂದುವರಿಸಿದಾಗ ಅನಿವಾರ್ಯವಾಗಿ ಗೋಲಿಬಾರ್ ಮಾಡಿದ್ದಾರೆ. ಮ್ಯಾಜಿಸ್ಟ್ರೇಟ್ ತನಿಖೆಗೆ ಆದೇಶಿಸಲಾಗಿದೆ. ನಿಷ್ಪಕ್ಷಪಾತ ತನಿಖೆ ನಡೆಯಲಿದೆ. ನಿರಪರಾಧಿಗಳ್ಯಾರಿಗೂ ತೊಂದರೆಯಾಗುವುದಿಲ್ಲ. ಆದರೆ ದೊಂಬಿಯಲ್ಲಿ ತೊಡಗಿದವರನ್ನು ಯಾರನ್ನೂ ಬಿಡುವುದಿಲ್ಲ. ರಾತ್ರಿಯೇ ಗಲಭೆಯನ್ನು ನಿಯಂತ್ರಿಸಿರುವ ಪೊಲೀಸರು ಈಗಾಗಲೇ ಹಲವರನ್ನು ಬಂಧಿಸಿದ್ದಾರೆ. ಅವರನ್ನು ಅಭಿನಂದಿಸುತ್ತೇನೆ." ಎಂದು ಹೇಳಿದರು.

ಇದಕ್ಕೂ ಮೊದಲು ಸಚಿವ ಸದಾನಂದ ಗೌಡರು ತಾವು ಪ್ರತಿನಿಧಿಸುವ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಗಲಭೆಯಾದ ಹಿನ್ನಲೆಯಲ್ಲಿ ದೆಹಲಿಯಿಂದ ಬೆಂಗಳೂರಿಗೆ ಧಾವಿಸಿದರು. ಹಾಗೆಯೇ ಮುಖ್ಯಮಂತ್ರಿ ಬಿ ಎಸ್ ಯಡ್ಯೂರಪ್ಪನವರ ಅಧ್ಯಕ್ಷತೆಯಲ್ಲಿ ಅವರ ಅಧಿಕೃತ ನಿವಾಸ ಕಾವೇರಿಯಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಪಾಲ್ಗೊಂಡು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.

**World Elephant Day Celebrated in Bannerghatta Biological Park**

## Bengaluru, 13th August(Karnataka Information):

On the occasion of World Elephant Day, Bannerghatta Biological Park (BBP) **acknowledges the contribution** of Mahouts and their families in the welfare of elephants.

On this occasion elephant calves at Bannerghatta zoo were given multiple feeding **enrichment** to increase foraging time and encourage natural behaviour. Enrichment included two fire hose balls filled grass along with treats such as carrot, sweet potato, banana, watermelon, sugarcane and jaggery. A fire hose was tied with multiple food items and tied to a tree to encourage animal to use its trunk to grab food from height. Also a pipe filled with treats were placed in the enclosure for the animal to use its trunk to pull out the food from inside. One of the elder calf Airavata ran away with a fire hose ball to feast on the treats inside it. While Suresh spent time in pulling out food from pipe and Rita, Gowri were seen foraging food which was hung using fire hose and another ball respectively.

Further to create **awareness**, display of posters, touch table with elephant dung to explain their role in maintaining a balance in the ecosystem made available both online and offline for public information. To sensitize children towards conservation of wildlife, elephant in specific, a drawing and elocution competition is conducted online through social media platform and entries can be sent to educationbbp@gmail.com.

Further a video has been released by the Member Secretary, Zoo Authority of Karnataka, Mysore Sri B.P Ravi, regarding preparation of nutritious ragi balls (Ragimudde) for elephants said press release.

## ಬನ್ನೇರುಘಟ್ಟ ಜೈವಿಕ ಉದ್ಯಾನವನದಲ್ಲಿ ವಿಶ್ವ ಆನೆ ದಿನಾಚರಣೆ

**ಬೆಂಗಳೂರು, ಆಗಸ್ಟ್ 13 (ಕರ್ನಾಟಕ ವಾರ್ತೆ) :**

ವಿಶ್ವ ಆನೆ ದಿನಾಚರಣೆಯ ಸಂದರ್ಭದಲ್ಲಿ ಬನ್ನೇರುಘಟ್ಟ ಜೈವಿಕ ಉದ್ಯಾನವನವು ಆನೆಗಳ ಆರೈಕೆಗಾಗಿ ಇಲ್ಲಿನ ಮಾವುತರ ಮತ್ತು ಅವರ ಕುಟುಂಬದ ಕೊಡುಗೆಯನ್ನು ಶ್ಲಾಘಿಸುತ್ತದೆ.

ಈ ಸಂದರ್ಭದಲ್ಲಿ ಮೃಗಾಲಯದಲ್ಲಿರುವ ಆನೆ ಮರಿಗಳ ನೈಸರ್ಗಿಕ ನಡವಳಿಕೆಯನ್ನು ಉತ್ತೇಜಿಸಲು ವಿವಿದ ಆಹಾರ ಪುಷ್ಟೀಕರಣವನ್ನು ಮಾಡಲಾಯಿತು. ಪುಷ್ಟೀಕರಣದಲ್ಲಿ ಎರಡು ಮೃದು ಪೈಪ್‌ನ ಒಳಗೆ ಹುಲ್ಲು, ಕ್ಯಾರೆಟ್, ಗೆಣಸು, ಬಾಳೆ ಹಣ್ಣು, ಕಲ್ಲಂಗಡಿ, ಕಬ್ಬು ಮತ್ತು ಬೆಲ್ಲವನ್ನು ತುಂಬಿಸಿ ಆನೆ ಮರಿಗಳಿಗೆ ತನ್ನ ಸೊಂಡಲಿನಿಂದ ಎತ್ತರದಲ್ಲಿ ಮರಕ್ಕೆ ಕಟ್ಟಲಾದ ಆಹಾರವನ್ನು ತೆಗೆದುಕೊಳ್ಳುವಂತೆ ಪ್ರೋತ್ಸಾಹ ನೀಡಲಾಯಿತು. ಈ ಸಂದರ್ಭದಲ್ಲಿ ಐರಾವತ ಆನೆ ಮರಿಯು ಬಹಳ ಸಂತೋಷದಿಂದ ಪುಷ್ಟಿಕರಣದ ಪೈಪ್ ಅನ್ನು ಎಳೆದುಕೊಂಡು ಓಡಾಡಿ ಅದರೊಳಗಿರುವ ಆಹಾರವನ್ನು ಸವಿಯಿತು. ಅದೇ ರೀತಿ ಸುರೇಶ ಎಂಬ ಆನೆ ಮರಿಯು ನೇರವಾಗಿ ಪೈಪ್ ಒಳಗಿರುವ ಆಹಾರವನ್ನು ಸವಿಯುತ್ತಾ ಕಾಲಕಳೆಯಿತು. ಹಾಗೂ ರೀಟಾ ಮತ್ತು ಗೌರಿ ಆನೆ ಮರಿಗಳು ನೇತು ಹಾಕಿರುವ ಆಹಾರದ ಮೇಲೆ ತಮ್ಮ ಗುರಿಯನ್ನು ಸಾಧಿಸಿದವು.

ಜಾಗೃತಿ ಮೂಡಿಸಲು, ಪೋಸ್ಟರ್‌ಗಳ ಪ್ರದರ್ಶನ, ಪರಿಸರ ವ್ಯವಸ್ಥೆಯಲ್ಲಿ ಸಮತೋಲನವನ್ನು ಕಾಯ್ದುಕೊಳ್ಳುವಲ್ಲಿ ಆನೆ ಲದ್ದಿಯ ಪಾತ್ರವನ್ನು ವಿವರಿಸಲು ಆನ್‌ಲೈನ್ ಮತ್ತು ಆಫ್‌ಲೈನ್‌ನಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಲಭ್ಯವಾಗುವಂತೆ ಮಾಡಲಾಯಿತು.

ವನ್ಯಜೀವಿಗಳ ಸಂರಕ್ಷಣೆ ಪ್ರಮುಖವಾಗಿ ಆನೆ ಕಡೆಗೆ ಮಕ್ಕಳನ್ನು ಸಂವೇದನಾಶೀಲರನ್ನಾಗಿ ಮಾಡಲು ಸಾಮಾಜಿಕ

ಮಾಧ್ಯಮ ವೇದಿಕೆಯ ಮೂಲಕ ಆನ್‌ಲೈನ್‌ನಲ್ಲಿ ಚಿತ್ರಕಲೆ ಮತ್ತು ಭಾಷಣ ಸ್ಪರ್ದೆಯನ್ನು ಏರ್ಪಡಿಸಲಾಗಿದ್ದು, ಆಸಕ್ತರು educationbbp@gmail.com ಗೆ ಕಳುಹಿಸಬಹುದಾಗಿರುತ್ತದೆ.

ಆನೆಗಳಿಗೆ ನೀಡುವ ಪೌಷ್ಠಿಕಾಂಶಯುಕ್ತ ರಾಗಿ ಮುದ್ದೆ ತಯಾರಿಸುವ ವೀಡಿಯೊ ಅನ್ನು ಕರ್ನಾಟಕ ಮೃಗಾಲಯ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಬಿ.ಪಿ ರವಿ ರವರು ಈ ಸಂದರ್ಭದಲ್ಲಿ ಬಿಡುಗಡೆಗೊಳಿಸಿದರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

**KARNATAKA STATE FINANCIAL CORPORATION (Annual General Meeting)**

## Bengaluru, 13th August(Karnataka Information):

During the 61st Annual General Meeting of Karnataka State Financial Corporation (KSFC), Dr. Ekroop Caur,I.A.S., Managing Director addressed the shareholders of the Corporation through video conferencing on 30th July 2020, due to the Covid pandemic. She shared salient aspects of the audited Annual Accounts for the year ended 31st March 2020 to the share holders.

**PERFORMANCE OF KSFC FOR THE YEAR 2019-20**

During the financial year 2019-20, the Corporation sanctioned term loan assistance to the tune of Rs.667.81 crore to MSMEs, disbursed an amount of Rs 727.90 crore. The recovery of loans was to the extent of Rs. 720.85 crore. The profit for the Financial Year 2019-20 is Rs.44.92 crore. The percentage of net NPA reduced to 5.12% during 2019-20 compared to 6.09% during last year. Since inception the Corporation has sanctioned Rs.17,884.72 crore to as many as 1,74,217 units in the State of Karnataka.

The Corporation since inception has assisted more than 21,700 Scheduled Caste & Scheduled Tribe Entrepreneurs amounting to over Rs.2000 crore. The Corporation has so far assisted more than 30,000 women entrepreneurs amounting to Rs.4243.67. As many as 41,000 entrepreneurs belonging to Backward classes and Minority Communities have been financially assisted by the Corporation with an amount of Rs.1748.40 crore. First Generation entrepreneurs were sanctioned an amount of Rs.164.70 crore so far.

The Corporation under various Interest Subsidy schemes of GoK has extended assistance so far as below:

| Sl. No. | Interest Subsidy Schemes of Government of Karnataka for | Beneficiaries | | | |
|---|---|---|---|---|---|
| | | 2019-20 | | Cumulative upto 31st July 2020 | |
| | | Nos. | Amount Sanctioned (Rs.in crore) | Nos | Amount Sanctioned (Rs.in crore) |
| 1 | Women Entrepreneurs | 165 | 145.15 | 1389 | 863.35 |
| 2 | Scheduled Caste & Tribe Entrepreneurs | 221 | 147.92 | 3218 | 1775.09 |
| 3 | Textile Grant Scheme for SC & ST Entrepreneurs | 20 | 44.17 | 55 | 124.70 |
| 4 | First Generation Entrepreneurs | -- | -- | 287 | 164.79 |
| 5 | Interest Subvention Scheme for all categories of entrepreneurs | 262 | 262.85 | 510 | 565.62 |
| 6 | Collateral Guarantee Fund Scheme for SC&ST Entrepreneurs | 33 | 34.15 | 110 | 129.78 |

## SUPPORT OF GOVERNMENT OF KARNATAKA TO KSFC

The above achievement is the result of a series of policy initiatives undertaken by the Corporation and implementation of flagship schemes of the Government of Karnataka for SC&ST, Women Entrepreneurs and Micro & Small Enterprises (MSEs) promoted by Manufacturing Enterprises promoted by all categories of entrepreneurs at net rate of interest of 4% payable by them and balance paid by the GoK as Interest Subsidy.

During the year, the Government of Karnataka provided an equity capital of Rs.100.00 crore and interest subsidy of Rs.71.50 crore under various schemes operated from KSFC. Under Textile Grant Scheme for

Scheduled Caste and Scheduled Tribe Entrepreneurs, a grant amount of Rs.20.14 crore was released by Government of Karnataka. Soft Seed Capital of Rs. 27.02 crore as equity for SC & ST entrepreneurs has been received by the GoK during 2019-20.

**PLANS FOR FY 2020-2021:**

The financial year 2020-21 is a year where in the economy has to face the "Challenges of Covid-19".The financial year 2020-21 for the Corporation also will be a mixed growth due to the volatility in the economy of the State. Government of India and Government of Karnataka are working out various reliefs and concessions for MSMEs to recover from the COVID-19 blow.

The focus of KSFC for the financial year 2020-21 is on creation of a quality portfolio by keeping the modest target for sanction at Rs. 600.00 crore and to reach the benefits of flagship Interest Subsidy / Subvention Schemes of the Government of Karnataka to MSEs promoted by various sections of the society across the State. The modified MSME definition w.e.f., 1st July 2020 facilitates numerous MSMEs in manufacturing and service sectors to avail the benefits of the Interest Subvention Scheme of Government of Karnataka, to be re-introduced during 2020-21. The focus of KSFC will also be on further reduction in NPAs and increasing operating profits says press release

# ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ವಾರ್ಷಿಕ ಮಹಾಸಭೆ

**ಬೆಂಗಳೂರು, ಆಗಸ್ಟ್ 13 (ಕರ್ನಾಟಕ ವಾರ್ತೆ) :**

**ಕರ್ನಾಟಕ ರಾಜ್ಯ ಹಣಕಾಸು** ಸಂಸ್ಥೆಯ 61ನೇ ವಾರ್ಷಿಕ ಮಹಾಸಭೆಯಲ್ಲಿ ಡಾ. ಏಕರೂಪ್ ಕೌರ್, ಭಾ.ಆ.ಸೇ, ವ್ಯವಸ್ಥಾಪಕ ನಿರ್ದೇಶಕರು, ವೀಡಿಯೋ ಕಾನ್ಫರೆನ್ಸ್ ಮುಖಾಂತರ ಸಂಸ್ಥೆಯ ಷೇರುದಾರರನ್ನು ಉದ್ದೇಶಿಸಿ ಮಾತನಾಡಿದರು. 31-03-2020ಕ್ಕೆ ಅಂತ್ಯಗೊಂಡ ಸಂಸ್ಥೆಯ ಕಾರ್ಯಾಚರಣೆಯನ್ನು ಹಾಗೂ ಪರಿಶೋದಿಸಲ್ಪಟ್ಟ ಲೆಕ್ಕಪತ್ರಗಳ ಪ್ರಮುಖ ಅಂಶಗಳನ್ನು ಹಂಚಿಕೊಂಡರು.

**2019-20ರಲ್ಲಿ ಸಂಸ್ಥೆಯ ಕಾರ್ಯಾಚರಣೆಯ ಮುಖ್ಯಾಂಶಗಳು:**

2019-20ರ ಆರ್ಥಿಕ ವರ್ಷದಲ್ಲಿ ವಿವಿಧ ಸಾಲ ಯೋಜನೆಗಳ ಮೂಲಕ 667.81 ಕೋಟಿ ರೂ.ಗಳ ಸಾಲ ಮಂಜೂರು ಮಾಡಲಾಗಿದೆ. 727.90 ಕೋಟಿ ರೂ.ಗಳನ್ನು ವಿತರಣೆ ಮಾಡಲಾಗಿದ್ದು ಪ್ರಸ್ತುತ 2019-20ರ ವರ್ಷದಲ್ಲಿ ಒಟ್ಟು 720.85 ಕೋಟಿ ರೂ.ಗಳನ್ನು ವಸೂಲಾತಿ ಮಾಡಲಾಗಿದೆ. ಪ್ರಸ್ತುತ ವರ್ಷದಲ್ಲಿ ಸಂಸ್ಥೆಯು 44.92 ಕೋಟಿ ರೂ.ಗಳಷ್ಟು ಲಾಭ ಗಳಿಸಿದೆ. ಶೇಕಡವಾರು ಅನುತ್ಪಾದಕ ನಿವ್ವಳ ಆಸ್ತಿಯು ಕಳೆದ ವರ್ಷದ ಶೇ 6.09 ರಿಂದ ಪ್ರಸ್ತುತ ವರ್ಷದಲ್ಲಿ ಶೇ 5.12 ಕ್ಕೆ ಇಳಿದಿರುತ್ತದೆ. ಸಂಸ್ಥೆಯು 31.3.2020 ರವರೆಗಿನ ಸಂಚಿತ ಮಂಜೂರಾತಿಯು 1,74,217 ಕೈಗಾರಿಕಾ ಘಟಕಗಳಿಗೆ ರೂ. 17,884.72 ಕೋಟಿ ರೂಗಳಷ್ಟಾಗಿರುತ್ತದೆ.

ಸಂಸ್ಥೆಯು ಈಗಾಗಲೇ 21,700 ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಉದ್ಯಮಿಗಳಿಗೆ 2000 ಕೋಟಿ ರೂ.ಗಳಿಗೂ ಅಧಿಕ ಸಾಲ ಮಂಜೂರಾತಿ ನೆರವನ್ನು ನೀಡಿರುತ್ತದೆ. ಸಂಸ್ಥೆಯು ಇಲ್ಲಿಯವರೆಗೆ 30,000 ಕ್ಕೂ ಹೆಚ್ಚಿನ ಮಹಿಳಾ ಉದ್ಯಮಿದಾರರಿಗೆ 4243.67 ಕೋಟಿ ರೂಗಳ ಅವಧಿ ಸಾಲ ಮಂಜೂರಾತಿ ಮಾಡಿರುತ್ತದೆ. 41,000 ಹಿಂದುಳಿದ ಹಾಗೂ ಅಲ್ಪಸಂಖ್ಯಾತ ಉದ್ಯಮಿಗಳಿಗೂ ಇದುವರೆಗೂ 1748.40 ಕೋಟಿ ರೂಗಳ ಸಾಲ ಮಂಜೂರಾತಿ ನೆರವನ್ನು ಒದಗಿಸಿದೆ. ಮೊದಲ ಪೀಳಿಗೆ ಉದ್ಯಮಿದಾರರಿಗೆ 164.70 ಕೋಟಿ ರೂಗಳ ಸಾಲ ಮಂಜೂರು ಒದಗಿಸಲಾಗಿದೆ.

ಕರ್ನಾಟಕ ರಾಜ್ಯಸರ್ಕಾರದ ಹಲವಾರು ಬಡ್ಡಿ ಸಹಾಯಧನ ಯೋಜನೆಯಡಿಯಲ್ಲಿ ಸಂಸ್ಥೆಯು ನೀಡಿರುವ ನೆರವಿನ ವಿವರಣೆ ಕೆಳಕಂಡಂತಿದೆ.

| ಕ್ರಮ ಸಂಖ್ಯೆ | ಕರ್ನಾಟಕ ಸರ್ಕಾರದ ಬಡ್ಡಿ ಸಹಾಯ ಧನ ಯೋಜನೆಗಳು | ನೆರವಿನ ವಿವರಣೆ | |
|---|---|---|---|
| | | 2019-20 | 31.07.2020 ರವರೆಗೆ ಸಂಚಿತ ನೆರವು |

| | | ಸಂಖ್ಯೆ | ಮಂಜೂರಾತಿ (ಕೋಟಿ ರೂ.ಗಳಲ್ಲಿ) | ಸಂಖ್ಯೆ | ಮಂಜೂರಾತಿ (ಕೋಟಿ ರೂ.ಗಳಲ್ಲಿ) |
|---|---|---|---|---|---|
| 1 | ಮಹಿಳಾ ಉದ್ಯಮಿದಾರರು | 165 | 145.15 | 1389 | 863.35 |
| 2 | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಉದ್ಯಮಿದಾರರು | 221 | 147.92 | 3218 | 1775.09 |
| 3 | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಉದ್ಯಮಿಗಳ ಜವಳಿ / ಕೈಮಗ್ಗ ಘಟಕಗಳಿಗೆ | 20 | 44.17 | 55 | 124.70 |
| 4 | ಮೊದಲ ಪೀಳಿಗೆ ಉದ್ಯಮಿದಾರರು | -- | -- | 287 | 164.79 |
| 5 | ಎಲ್ಲಾ ವರ್ಗದ ಉದ್ಯಮಿದಾರರಿಗೆ ಬಡ್ಡಿ ಸಹಾಯಧನ ಯೋಜನೆ | 262 | 262.85 | 510 | 565.62 |
| 6 | ಪರಿಶಿಷ್ಟಜಾತಿ/ಪರಿಶಿಷ್ಟ ಪಂಗಡಗಳ ಉದ್ಯಮಿಗಳಿಗೆ ಪೂರಕ ಭದ್ರತಾ ಖಾತರಿ ಯೋಜನೆ | 33 | 34.15 | 110 | 129.78 |

**ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ರಾಜ್ಯ ಸರ್ಕಾರದ ನೆರವು:**

ಸಂಸ್ಥೆಯು ಕೈಗೊಂಡಿರುವ ಹಲವಾರು ಉಪಕ್ರಮಗಳು ಹಾಗೂ ಪ್ರಮುಖ ಯೋಜನೆಗಳಾದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಉದ್ಯಮಿಗಳಿಗೆ, ಮಹಿಳಾ ಉದ್ಯಮಿಗಳಿಗೆ ಹಾಗೂ ಎಲ್ಲಾ ವರ್ಗದ ಉದ್ಯಮಿಗಳಿಗೆ ಲಭ್ಯವಿರುವ ಶೇ 4ರ ನಿವ್ವಳ ಬಡ್ಡಿದರದಲ್ಲಿ ಆರ್ಥಿಕ ಸಹಾಯ ಯೋಜನೆಗಳ ಯಶಸ್ವಿ ಅನುಷ್ಠಾನದ ಪ್ರತಿಫಲವಾಗಿ ಸಂಸ್ಥೆಯು ಮೇಲಿನ ಸಾಧನೆಯನ್ನು ಗಳಿಸಲು ಸಾಧ್ಯವಾಗಿದೆ. ಕರ್ನಾಟಕ ಸರ್ಕಾರದ ವತಿಯಿಂದ ಉಳಿದ ಬಡ್ಡಿದರವು ಸಹಾಯಧನದ ರೂಪದಲ್ಲಿ ಪಾವತಿಯಾಗುತ್ತದೆ.

ಪ್ರಸ್ತುತ ಹಣಕಾಸು ವರ್ಷದಲ್ಲಿ ಕರ್ನಾಟಕ ಸರ್ಕಾರವು ಸಂಸ್ಥೆಗೆ 100.00 ಕೋಟಿ ರೂ.ಗಳ ಈಕ್ವಿಟಿ ಬಂಡವಾಳವನ್ನು ಹಾಗೂ 71.50 ಕೋಟಿ ರೂ.ಗಳ ಬಡ್ಡಿ ಸಹಾಯಧನದ ನೆರವನ್ನು ಮೇಲಿನ ಯೋಜನೆಗಳಡಿಯಲ್ಲಿ ಒದಗಿಸಿದೆ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಉದ್ಯಮಿಗಳು ಸ್ಥಾಪಿಸುವ ಜವಳಿ ಮತ್ತು ಕೈಮಗ್ಗ ಘಟಕಗಳಿಗೆ ವಿಶೇಷ ಹಣಕಾಸಿನ ಯೋಜನೆಯಡಿಯಲ್ಲಿ ಕರ್ನಾಟಕ ಸರ್ಕಾರವು 20.12 ಕೋಟಿ ರೂ.ಗಳ ಅನುದಾನವನ್ನು ಬಿಡುಗಡೆ ಮಾಡಿದೆ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಉದ್ಯಮಿದಾರರಿಗೆ ಬಂಡವಾಳವಾಗಿ 27.02 ಕೋಟಿ ರೂಗಳ ಸರಳಬೀಜ ಧನವನ್ನು ಕರ್ನಾಟಕ ಸರ್ಕಾರವು ನೀಡಿರುತ್ತದೆ.

**2020-21 ನೇ ಸಾಲಿನ ಗುರಿಗಳು**

ಸದರಿ 2020–21ರ ಹಣಕಾಸು ವರ್ಷವನ್ನು "ಕೋವಿಡ್–19 ರ ಸವಾಲುಗಳ ವರ್ಷ" ವೆಂದು ಪರಿಗಣಿಸಲಾಗಿದೆ. ರಾಜ್ಯದ ಆರ್ಥಿಕತೆಯಲ್ಲಾದ ಚಂಚಲತೆಯಿಂದಾಗಿ ಪ್ರಸ್ತುತ ವರ್ಷದಲ್ಲಿ ಸಂಸ್ಥೆಯೂ ಸಹಾ ಮಿಶ್ರ ಬೆಳವಣಿಗೆಯನ್ನೇ ನಿರೀಕ್ಷಿಸಲಿದೆ. ಕೊರೊನಾ ಏಟಿನಿಂದ ಮಧ್ಯಮ, ಸಣ್ಣ ಹಾಗೂ ಸೂಕ್ಷ್ಮ ಘಟಕಗಳನ್ನು ರಕ್ಷಿಸುವ ನಿಟ್ಟಿನಲ್ಲಿ ಭಾರತ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಅನೇಕ ಪರಿಹಾರ ಹಾಗೂ ರಿಯಾಯಿತಿಗಳನ್ನು ನೀಡುವ ದಿಕ್ಕಿನಲ್ಲಿ ಕಾರ್ಯಗತವಾಗಿವೆ.

2020–21ರ ಆರ್ಥಿಕ ವರ್ಷದಲ್ಲಿ ಸಂಸ್ಥೆಯು ತಲಾ ರೂ. 600.00 ಕೋಟಿಗಳ ಮಂಜೂರಾತಿ ಗುರಿಯನ್ನು ಹೊಂದಿದ್ದು ಕರ್ನಾಟಕ ಸರ್ಕಾರದ ಬಡ್ಡಿ ಸಹಾಯಧನ ಯೋಜನೆಗಳ ಯಶಸ್ವಿ ಅನುಷ್ಠಾನದೊಂದಿಗೆ ಸಮಾಜದ ವಿವಿಧ ವರ್ಗಗಳಿಂದ ಸ್ಥಾಪಿಸಲ್ಪಡುವ ಎಂ.ಎಸ್.ಎಂ.ಇ ಗಳಿಗೆ ನೆರವು ನೀಡುವ ಕಡೆಗೆ ಹೆಚ್ಚಿನ ಗಮನವನ್ನು ಕೇಂದ್ರೀಕರಿಸಲಿದೆ. ಎಂ.ಎಸ್.ಎಂ.ಇ ಗಳ ಪರಿಷ್ಕೃತ ನಿರೂಪಣೆಯು 01.07.2020 ರಿಂದ ಜಾರಿಗೊಳ್ಳಲಿದ್ದು ಉತ್ಪಾದಕ ಹಾಗೂ ಸೇವಾ ವಲಯಗಳಿಂದ ಸ್ಥಾಪಿಸಲ್ಪಡುವ ಘಟಕಗಳಿಗೆ ಕರ್ನಾಟಕ ರಾಜ್ಯ ಸರ್ಕಾರದ ಸಬ್‌ವೆನ್ಷನ್ ಯೋಜನೆಯನ್ನು 2020–21 ರಿಂದ ಸಂಸ್ಥೆಯಲ್ಲಿ ಪುನರ್ ಪರಿಚಯಿಸುತ್ತಿರುವುದು ಉದ್ಯಮಿಗಳಿಗೆ ವರದಾನವಾಗಲಿದೆ. ಅಲ್ಲದೆ ಅನುತ್ಪಾದಕ ಆಸ್ತಿಗಳನ್ನು ಮತ್ತಷ್ಟು ಕಡಿಮೆಗೊಳಿಸಲು ಸಂಸ್ಥೆಯು ಹೆಚ್ಚಿನ ಒತ್ತು ನೀಡಲಿದೆ ಅಧಿಕೃತ ಪ್ರಕಟಣೆ ತಿಳಿಸಿದೆ.

## ಪಿ. ಯು. ಸಿ ಪಾಸಾದ ವಿದ್ಯಾರ್ಥಿಗಳಿಗೆ– 5 ವರ್ಷಗಳ ಬಿ.ಎಸ್ಸಿ – ಎಂ. ಎಸ್ಸಿ ಜೈವಿಕ ವಿಜ್ಞಾನ ಸ್ನಾತಕೋತ್ತರ ಪದವಿ (ಇಂಟಿಗ್ರೇಟೆಡ್) ಮೊದಲ ಸೆಮಿಸ್ಟರ್ ಕೋರ್ಸ್‌ಗೆ ಪ್ರವೇಶ ಪಡೆಯಲು ಅರ್ಜಿ ಆಹ್ವಾನ– 2020–21

ಬೆಂಗಳೂರು ವಿಶ್ವವಿದ್ಯಾಲಯ ಆರಂಭಿಸಿರುವ ಐದು ವರ್ಷದ **ಇಂಟಿಗ್ರೇಟೆಡ್**ಕೋರ್ಸ್‌ಗೆ ದ್ವಿತೀಯ ಪಿ.ಯು.ಸಿ ಉತ್ತೀರ್ಣರಾದ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಪಿ.ಯು.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಪ್ರತಿಶತ 50%ರಷ್ಟು ಅಂಕಗಳಿಸಿದ ಸಾಮಾನ್ಯ ವರ್ಗದ ವಿದ್ಯಾರ್ಥಿಗಳು ಹಾಗು ಪ್ರತಿಶತ 45% ರಷ್ಟು ಅಂಕಗಳಿಸಿದ **ಪ.ಜಾ./ಪ.ಪಂ/ ಪ್ರವರ್ಗ–1 ರ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಅಭ್ಯರ್ಥಿಗಳ ಆಯ್ಕೆಯ ಪ್ರಕ್ರಿಯೆಯನ್ನು ಅವರುಗಳಿಸಿದ ಅಂಕಗಳ ಜೇಷ್ಟತಾ ಅಧಾರದ ಮೇಲೆ ನಿರ್ಧರಿಸಲಾಗುವುದು.**

**ಅರ್ಜಿ ಸಲ್ಲಿಸಲು ವಿವರಗಳು ಈ ಕೆಳಕಂಡಂತಿದೆ.**

| | | |
|---|---|---|
| ಅ) ಆನ್‌ಲೈನ್ ಮೂಲಕ ಅರ್ಜಿಸಲ್ಲಿಸಲು ಕೊನೆಯ ದಿನಾಂಕ | 28/08/2020 | |
| ಆ) ಸಾಮಾನ್ಯ ಮತ್ತು ಪೇಮೆಂಟ್ ಸೀಟು ಎರಡಕ್ಕೂ 28/08/2020 ರೊಳಗೆ ಅರ್ಜಿ ಸಲ್ಲಿಸುವವರು | ಸಾಮಾನ್ಯ ವರ್ಗ<br>ರೂ. 400/– | ಪ.ಜಾ./ಪ.ಪಂ/ ಪ್ರವರ್ಗ–1<br>ರೂ. 200/– |
| ಇ) ಸಾಮಾನ್ಯ ಮತ್ತು ಪೇಮೆಂಟ್ ಸೀಟು ಎರಡಕ್ಕೂ 28/08/2020 ರಿಂದ 31/08/2020 ರೊಳಗೆ ಅರ್ಜಿ ಸಲ್ಲಿಸುವವರು ರೂ. 100/– ದಂಡ ಶುಲ್ಕದೊಂದಿಗೆ ಅರ್ಜಿ | ರೂ. 500/– | ರೂ. 300/– |

| | | |
|---|---|---|
| ಸಲ್ಲಿಸಬಹುದು. | | |
| ಈ) ಜೇಷ್ಠತಾ ಪಟ್ಟಿ ಪ್ರಕಟಿಸುವ ದಿನಾಂಕ | 05/09/2020 | |
| ಉ) ಪ್ರವೇಶ ಪ್ರಕ್ರಿಯೆಯ ದಿನಾಂಕ | 09/09/2020 | |

ಭರ್ತಿ ಮಾಡಿ ಡೌನ್‌ಲೋಡ್ ಅರ್ಜಿಯೊಂದಿಗೆ ಇತರೆ ದಾಖಲಾತಿಗಳೊಂದಿಗೆ ಮುಖ್ಯಸ್ಥರು, ಜೀವ ವಿಜ್ಞಾನ ವಿಭಾಗ, ಜ್ಞಾನಭಾರತಿ ಆವರಣ, ಬೆಂಗಳೂರು– 560056. ಇವರಿಗೆ ಸಲ್ಲಿಸತಕ್ಕದ್ದು, ಹೆಚ್ಚಿನ ವಿವರಗಳಿಗೆ ಬೆಂಗಳೂರು– 560056, ದೂರವಾಣಿ ಸಂಖ್ಯೆ: 22961521/1923/8722048456 ರವರನ್ನು ಸಂಪರ್ಕಿಸಲು ಕೋರಲಾಗಿದೆ.

## Admission open for 5 year Integrated B.Sc.-M.Sc. in Biological Sciences at Bangalore University

Bengaluru, 13th August(Karnataka Information):

Applications are invited for admission to the I semester of Five Year Integrated B.Sc. – M.Sc. Biological Sciences course, Department of Life Science, Jnanabharathi Campus, Bangalore University, Bangalore – 560056 for the academic year 2020-21 from candidates who have completed two year Pre University course of Karnataka state or equivalent thereto with science subjects as optional and have secured atleast 50%(in case of SC/ST 45%) of marks in aggregate of all papers studied including languages at the qualifying examination.

The admission notification can be downloaded from the University website www.bangaloreuniversity.ac.in. Application shall be filled–up online mode only by visiting the above official website on or before 31/08/2020. Hard copy of Online filled application and Application fee for **Rs. 400/- (Rs. 200/- for SC/ ST/ Cat-1)** paid online should be submitted/ sent by post so as to reach on or before the last date to the office of the Chairman, Department of Life Science, Bangalore University, Jnanabharathi, Bangalore – 560 056 along with attested copies of the required documents.

**For more details contact**: **The Chairman**, Dept. of Life Science/ Biological Sciences
Phone no. 080-22961521; 22961923 Mobile no: 8722048456 Email id: shivashankarseri@gmail.com , lifescience@bub.ernet.in Website: www.bangaloreuniversity.ac.in says press release

## ಅರ್ಜಿ ಅಹ್ವಾನ

**ಬೆಂಗಳೂರು, 13ಆಗಸ್ಟ್(ಕರ್ನಾಟಕ ವಾರ್ತೆ)**

**ರಾಷ್ಟ್ರೀಯ ಇಂಡಿಯನ್ ಮಿಲಿಟರಿ ಕಾಲೇಜ್, ಡೆಹಾರಡೂನ್, ಇಲ್ಲಿಗೆ 8ನೇ ತರಗತಿ ಪ್ರವೇಶ ಬಯಸುವ ಕರ್ನಾಟಕದ ಬಾಲಕರ ಪ್ರವೇಶ ಪರೀಕ್ಷೆಗೆ ಅರ್ಜಿ ಆಹ್ವಾನಿಸಿದೆ.**

**ಜುಲೈ 2021 ನೇ ಅಧಿವೇಶನಕ್ಕಾಗಿ ಉತ್ತರಾಖಂಡ ರಾಜ್ಯದ ಡೆಹಾರಡೂನಲ್ಲಿರುವ ರಾಷ್ಟ್ರೀಯ** ಇಂಡಿಯನ್ ಮಿಲಿಟರಿ ಕಾಲೇಜ್, ಇಲ್ಲಿಗೆ 8ನೇ ತರಗತಿ ಪ್ರವೇಶ ಬಯಸುವ ಕರ್ನಾಟಕದ ಬಾಲಕರಿಗೆ ಅರ್ಹತಾ ಪ್ರವೇಶ ಪರೀಕ್ಷೆಯನ್ನು **ಬೆಂಗಳೂರು ಕೇಂದ್ರದಲ್ಲಿ ಡಿಸಂಬರ್ 01 ಮತ್ತು 2, 2020 ರಂದು ನಡೆಸಲಾಗುವುದು. ಅಭ್ಯರ್ಥಿಗಳು ಯಾವುದೇ ಸರ್ಕಾರದಿಂದ ಮಾನ್ಯತೆ ಪಡೆದಿರುವ ಶಾಲೆಯಲ್ಲಿ 7ನೇ ತರಗತಿಯಲ್ಲಿ ಉತ್ತೀರ್ಣಾರಾಗುರುವ ಹಾಗೂ ದಿನಾಂಕ 01-07-2021 ರಂತೆ 11 1/2 ವರ್ಷದಿಂದ 13 ವರ್ಷದೊಳಹಿರುವ (ಅಂದರೆ ದಿನಾಂಕ 02-07-2008 ರಿಂದ 01-01-2010 ರೊಳಗೆ ಜನಿಸಿರುವ ಬಾಲಕರು ಮಾತ್ರ ಸದರಿ ಪ್ರವೇಶ ಪರೀಕ್ಷೆಗೆ ಅರ್ಹರಿರುತ್ತಾರೆ. ಕಾಲೇಜಿನಲ್ಲಿ ವರ್ಷವೊಂದಕ್ಕೆ ಪ್ರಸಕ್ತ ವಿದ್ಯಾಭ್ಯಾಸ ಶುಲ್ಕ ರೂ. 107500/- (Gen Category) ಹಾಗೂ ರೂ 93900/- (SC/ST) ಆಗಿರುತ್ತದೆ.**

**ಭರ್ತಿ ಮಾಡಿದ ನಿಗದಿತ ಅರ್ಜಿ ನಮೂನೆಯನ್ನು ದ್ವಿಪ್ರತಿಯಲ್ಲಿ ಅಡಕಗಳೊಂದಿಗೆ ದಿನಾಂಕ 30-09-2020 ರೊಳಗಾಗಿ ವಿವರಣ ಪತ್ರ ಹಾಗೂ ಹಳೇ ಪ್ರಶ್ನೆ ಪತ್ರಿಕೆಗಳನ್ನೊಳಗೊಂಡ ಅರ್ಜಿ ನಮೂನೆಯನ್ನು ಕೋರಿಕೆ ಪತ್ರದ ಮೇರೆಗೆ ನಿರ್ದೇಶಕರು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಭವನ, ನಂ.58 ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಭವನ, ಬೆಂಗಳೂರು-560 025, ಇಲ್ಲಿಂದ "THE COMMANDANT RIMC DEHARADUN'' PAYABLE AT SBI, TEL BHAVAN, DEHRADUN (BANK CODE NO.01576) ಇವರ ಹೆಸರಿನಲ್ಲಿ ಸೆಳೆದ ರೂ. 600/- (ಸಾಮಾನ್ಯ ಅಭ್ಯರ್ಥಿಗಳಿಗೆ) ಮತ್ತು ರೂ. 555/-(ಎಸ್/ಎಸ್‌ಟಿ ಅಭ್ಯರ್ಥಿಗಳಿಗೆ)**

ಡಿಮಾಂಡ್ ಡ್ರಾಫ್ಟ್ ಮೂಲಕ ಖುದ್ದಾಗಿ ಪಡೆಯಬಹುದಾಗಿದೆ. ರಿಜಿಸ್ಟರ್ಡ್ ಪಾರ್ಸಲ್ ಮೂಲಕ ಅರ್ಜಿ ನಮೂನೆಗಳನ್ನು ಪಡೆಯಲಿಚ್ಚಿಸಲಿರುವ ಅಭ್ಯರ್ಥಿಗಳು ಮೇಲೆ ತಿಳಿಸಿದ ಬ್ಯಾಂಕ್ ಡ್ರಾಫ್ಟ್‌ನೊಂದಿಗೆ **11''X 9''** ಸೈಜಿನ ಸ್ವವಿಳಾಸದ ಲಕೋಟೆಯ ಮೇಲೆ ರೂ. 40/- ಮೌಲ್ಯದ ಅಂಚೆ ಚೀಟಿ ಲಗತ್ತಿಸಿ ಕಳುಹಿಸಬೇಕು. ಲಕೋಟೆಯ ಮೇಲೆ ಅಭ್ಯರ್ಥಿಯ ಪೂರ್ಣ ಅಂಚೆ ಮತ್ತು ದೂರವಾಣಿ ಸಂಖ್ಯೆನ್ನು ಸ್ಪಷ್ಟವಾಗಿ ನಮೂದಿಸಬೇಕು.

ಮುನಿಸಪಾಲಿಟಿ / ಗ್ರಾಮ ಪಂಚಾಯತ್ ಪ್ರಾಧಿಕಾರ ವತಿಯಿಂದ ಆಂಗ್ಲ ಭಾಷೆಯಲ್ಲಿ ಪಡೆದ ಅಭ್ಯರ್ಥಿಯ ಜನ್ಮ ಪ್ರಮಾಣ ಪತ್ರದ ಧೃಢಿಕೃತ ಪ್ರತಿ. 5 ಪಾಸ್‌ಪೋರ್ಟ್ ಸೈಜಿನ ಭಾವಚಿತ್ರಗಳು.(ಅರ್ಜಿಗಳಲ್ಲಿ ಅಂಟಿಸಿದ ಭಾವಚಿತ್ರವನ್ನು ಸೇರಿಸಿ).ಎಸ್ಸಿ/ಎಸ್ಟಿ ಅಭ್ಯರ್ಥಿಗಳಾಗಿದ್ದಲ್ಲಿ, ಸಕ್ಷಮ ಪ್ರಾಧಿಕಾರದಿಂದ ನೀಡಿದ ಜಾತಿ ಪ್ರಮಾಣ ಪತ್ರದ ಧೃಢೀಕೃತ ಪ್ರತಿ (ಆಂಗ್ಲ ಭಾಷೆಯಲ್ಲಿ ಇರುವಂತೆ ಮಾತ್ರ). ಪರೀಕ್ಷಾ ಪ್ರವೇಶ ಪತ್ರವನ್ನು ತ್ವರಿತ/ನೊಂದಾಯಿತ ಅಂಚೆದ್ವಾರ ರವಾನಿಸಲು ರೂ.40/ಅಂಚೆ ಚೀಟಿ ಅಂಟಿಸಿದ ಸ್ವವಿಳಾಸ ಲಕೋಟೆಯಲ್ಲಿ ಸಲ್ಲಿಸತಕ್ಕದ್ದು.

ಶಾಲಾ ಪ್ರಾಚಾರ್ಯರು/ಮುಖ್ಯೋಪಾಧ್ಯಾಯರಿಂದ ಅಭ್ಯರ್ಥಿಯ ಜನ್ಮ ದಿನಾಂಕ ಮತ್ತು ಓದುತ್ತಿರುವ ತರಗತಿ ಬಗ್ಗೆ ಪಡೆದ ಪ್ರಮಾಣ ಪತ್ರದ ಮೂಲ ಪ್ರತಿ (ಧೃಢಿಕರಿಸಿದ ಅಭ್ಯರ್ಥಿಯ ಭಾವ ಚಿತ್ರದೊಂದಿಗೆ). ಈ ರಾಜ್ಯದ ವಾಸಸ್ಥಾನ ಧೃಢಿಕರಣ ಪತ್ರ (ತಹಸೀಲ್ದಾರರಿಂದ)

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 080-25589459 ಅಥವಾ ಸಮೀಪದಲ್ಲಿರುವ ತಮ್ಮ ಜಿಲ್ಲಾ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಕಾರ್ಯಾಲಯವನ್ನು ಸಂಪರ್ಕಿಸುವುದು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## Applications Invited

Bengaluru, 13th August(Karnataka Information)

Applications are invited from Boys of Karnataka for admission to Rashtriya Indian Military College (RIMC), Dehradun (Uttarakhand) for July 2021 Term.

The Entrance Examination for the same will be conducted in Bangalore on 1st and 2nd Dec 2020. Candidates appearing for the above test should not be less than 11½ Years in age but should not have attained the of 13 years as on 01 July 2021.i.e they should have been born not earlier than 02 July 2008 and not later than 01 Jan 2010. The boy should either be studying in Class VII or passed Class VII from any recognized school at the time of admission to the RIMC, i.e. on 01 July 2021. The primary aim of this institution is to prepare the boys for entry into

Defence Services and to provide quality all round education to young boys. The annual fee is presently Rs. 107500/- for general candidates and Rs. 93900/- for SC/ST candidates per year.

Procedure to obtain Application Forms: The prospectus-cum-application form and booklet of old question papers can be obtained personally/Registered Post by sending a written request from the Director, Department of Sainik Welfare and Resettlement, Field Marshal KM Cariappa Bhavan, 58, Field Marshal KM Cariappa Road, Bangalore-560025 on payment of Rs.600/- (for speed post) (for General Candidates) and (Rs. 555/- for SC/ST Candidates) through Demand Draft favouring "THE COMMANDANT RIMC DEHRADUN'' PAYABLE AT SBI, TEL BHAVAN , DEHRADUN (BANK CODE NO. 01576). Candidates who desires to obtain the application form by Registered Parcel should send a self addressed envelope measuring 11"x 9'' size duly affixed with Rs. 40/- postage stamps. The address should be TYPED/WRITTEN clearly in CAPITAL LETTERS with PIN CODE and contact number on the envelope. Department of Sainik Welfare and Resettlement will not be responsible for any postal delay or loss in transit.

Last date. Prescribed application forms duly completed, in duplicate, should reach Director, Department of Sainik Welfare and Resettlement, Field Marshal KM Cariappa Bhavan, 58, Field Marshal KM Cariappa Road, Bangalore-560025 along with the following documents on or before 30/09/2020:

Five passport size photographs (including one each affixed on the application form). Attested copy of Birth Certificate issued by Municipal Corporation/Gram Panchayat (in English version only).

Attested copy of SC/ST certificate for SC/ST candidates (in English version only). Admit card envelope duly addressed and affixed with Rs.40/- for sending the Admission Ticket by Speed/Registered Post. Certificate from the Principal of the school in original with photograph on it attested stating date of birth and in which class studying. A state Domicile Certificate from Tahsildar.

For further details contact 080-25589459 or your nearest District Sainik Welfare and Resettlement offices says press release.

## ಗಣಕಯಂತ್ರ ಶಿಕ್ಷಣ ಶಾಲೆಗಳನ್ನು ಪ್ರಾರಂಭಿಸಲು ಅರ್ಜಿ ಆಹ್ವಾನ

**ಬೆಂಗಳೂರು, ಆಗಸ್ಟ್ 13 (ಕರ್ನಾಟಕ ವಾರ್ತೆ)**

**ಸಾರ್ವಜನಿಕ ಶಿಕ್ಷಣ ಇಲಾಖೆಯು 2020-21 ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಾದ್ಯಂತ ಅಂಗೀಕೃತ ವಾಣಿಜ್ಯ ಶಿಕ್ಷಣ ಶಾಲೆಗಳಲ್ಲಿ ಹೊಸದಾಗಿ ಗಣಕಯಂತ್ರ ಶಿಕ್ಷಣ ಕೋರ್ಸ್ ಅಥವಾ ಶಾಲೆಗಳನ್ನು ಪ್ರಾರಂಭಿಸಲು ಅರ್ಜಿ ಸಲ್ಲಿಸಲು ದಿನಾಂಕವನ್ನು 31ನೇ ಆಗಸ್ಟ್ 2020ರ ವರೆಗೆ ವಿಸ್ತರಿಸಲಾಗಿದೆ.**

**ಬೆಂಗಳೂರು ವಿಭಾಗಕ್ಕೆ ಸಂಬಂಧಪಟ್ಟಂತೆ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು. ಇವರಿಗೆ ಹಾಗೂ ಕಲಬುರ್ಗಿ, ಬೆಳಗಾವಿ ಹಾಗೂ ಮೈಸೂರು ವಿಭಾಗಗಳಿಗೆ ಸಂಬಂಧಪಟ್ಟಂತೆ ಆಯಾ ವಿಭಾಗದ ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹನಿರ್ದೇಶಕರಿಗೆ ಅರ್ಜಿಯನ್ನು ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ ವಿಳಾಸ www.schooleducation.kar.nic.in:---secondary education --- commerce education ನಲ್ಲಿ ಲಭ್ಯವಿರುವ ಸರ್ಕಾರಿ ಆದೇಶ ದಿನಾಂಕ 23-03-2013ನ್ನು ನೋಡಲು ನಿರ್ದೇಶಕರು ಪ್ರೌಢ ಶಿಕ್ಷಣ ಇವರ ಪ್ರಕಟಣೆ ತಿಳಿಸಿದೆ.**

## ಸ್ವಯಂಪ್ರೇರಿತರಾಗಿ ರಕ್ತದಾನ ಮಾಡಲು ಮುಂದಾಗಬೇಕೆಂದು ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಮನವಿ

ಬೆಂಗಳೂರು, ಆಗಸ್ಟ್ 13, (ಕರ್ನಾಟಕ ವಾರ್ತೆ) :

ಕರ್ನಾಟಕ ರೆಡ್ ಕ್ರಾಸ್ ರಕ್ತನಿಧಿಯು ಮಾಸಿಕ 3500 ಯೂನಿಟ್ ಗಳಿಗಿಂತ ಹೆಚ್ಚು ರಕ್ತ ಸಂಗ್ರಹಿಸುತ್ತಿದ್ದು, ರಕ್ತಹೀನತೆ, ಗರ್ಭಿಣಿ ಮಹಿಳೆಯರಿಗೆ, ತಲಸ್ಸೇಮಿಯಾ, ಸಿಕಲ್ ಸೆಲ್, ಅನೀಮಿಯ, ಡಯಾಲಿಸಿಸ್, ಕ್ಯಾನ್ಸರ್, ತುರ್ತು ಶಸ್ತ್ರಚಿಕಿತ್ಸೆ ಮತ್ತು ಇತರೆ ರೋಗಿಗಳಿಗೆ ಸುಮಾರು 5000 ಯೂನಿಟ್ ಗಳಿಗಿಂತ (ಎಲ್ಲಾ ರಕ್ತದ ಬಿಡಿಭಾಗಗಳು ಸೇರಿ) ಹೆಚ್ಚು ಬೆಂಗಳೂರಿನ ಸರ್ಕಾರಿ ಮತ್ತು ಸರ್ಕಾರೇತರ ಆಸ್ಪತ್ರೆಗಳಿಗೆ, ಹೊರ ಜಿಲ್ಲೆಗಳ ರಕ್ತ ಸಂಗ್ರಹಣಾ ಘಟಕಗಳಿಗೆ ವಿತರಿಸಲಾಗುತ್ತಿತ್ತು. ಕೊರೊನಾ ವೈರಸ್ ಬಾಧೆಯ ಹಿನ್ನೆಲೆಯಲ್ಲಿ ರಕ್ತದಾನ ಪ್ರಕ್ರಿಯೆ ಬಹುತೇಕ ಸ್ಥಗಿತಗೊಂಡಿದ್ದು ನಮ್ಮ ರಕ್ತನಿಧಿ ಯಲ್ಲಿಯೇ ನಮ್ಮ ರಕ್ತನಿಧಿಯಲ್ಲದೇ ರಾಜ್ಯದ ಬಹುತೇಕ ರಕ್ತನಿಧಿ ಕೇಂದ್ರಗಳೆಲ್ಲವೂ ರಕ್ತ ಸಂಗ್ರಹದ ಕೊರತೆಯನ್ನು ಎದುರಿಸುತ್ತಿದೆ.

ರಕ್ತಕ್ಕೆ ಯಾವುದೇ ಪರ್ಯಾಯ ಇರುವುದಿಲ್ಲ. ಈ ರಕ್ತದ ಅವಶ್ಯಕತೆಯನ್ನು ಪೂರೈಸಲು ರಕ್ತದಾನಿಗಳಿಂದ ಮಾತ್ರ ಸಾಧ್ಯ. ಹೀಗಾಗಿ ತಿಂಗಳಿಗೆ 3500 ಯೂನಿಟ್ ಗಳಿಗಿಂತ ಹೆಚ್ಚು ರಕ್ತದ ಸಂಗ್ರಹ ಅನಿವಾರ್ಯವಾಗಿರುತ್ತದೆ. ಪ್ರಸ್ತುತ

ಕರ್ನಾಟಕ ರೆಡ್ ಕ್ರಾಸ್ ರಕ್ತನಿಧಿ, ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು ರಕ್ತನಿಧಿ ಯಲ್ಲಿ ಕೆಲವು ಯೂನಿಟ್ ಗಳು ಮಾತ್ರವೇ ಇದ್ದು, ರಕ್ತನಿಧಿಯಲ್ಲಿ ರಕ್ತದ ಅಭಾವವು ಹೆಚ್ಚಾಗಿದ್ದು, ಪ್ರತಿದಿನವೂ 100 ಯೂನಿಟ್ ಗಳಿಗಿಂತ ಹೆಚ್ಚು ರಕ್ತದ ಬೇಡಿಕೆ ಇರುತ್ತದೆ.

ಈ ಕೊರತೆ ಸರಿಪಡಿಸಲು ಸ್ವಯಂಪ್ರೇರಿತರಾಗಿ ರಕ್ತದಾನಿಗಳು ರಕ್ತದಾನ ಮಾಡಲು ಮುಂದಾಗಬೇಕೆಂದು ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆಯ ಸಭಾಪತಿಗಳಾದ ಶ್ರೀ ನಾಗಣ್ಣ ನವರು ಮನವಿ ಮಾಡಿಕೊಳ್ಳುತ್ತಿದ್ದಾರೆ.

ಪ್ರಸ್ತುತ ಪರಿಸ್ಥಿತಿಯಲ್ಲಿ ನ್ಯಾಷನಲ್ ಬ್ಲಡ್ ಟ್ರಾನ್ಸ್ ಫ್ಯೂಷನ್ ಕೌನ್ಸಿಲ್ (ಎನ್.ಬಿ.ಸಿ.ಟಿ.) ಮಾರ್ಗದರ್ಶಿಯನ್ನು ನೀಡಿದ್ದು ಈ ಪ್ರಕಾರ ಸಾಮಾಜಿಕ ಅಂತರ ಕಾಯ್ದುಕೊಳ್ಳುವುದರೊಂದಿಗೆ ಕೊರೋನಾ ಸಾಂಕ್ರಾಮಿಕ ರೋಗ ಹರಡದ ರೀತಿಯಲ್ಲಿ ಎಲ್ಲಾ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಂಡು ಆರೋಗ್ಯವಂತ ರಕ್ತದಾನಿಗಳಿಂದ ರಕ್ತವನ್ನು ಸುರಕ್ಷಿತವಾಗಿ ಸಂಗ್ರಹಿಸಲಾಗುವುದು.

ಈ ಸಂಬಂಧ ಸ್ವಯಂ ಪ್ರೇರಿತ ರಕ್ತದಾನ ಮಾಡಲಿಚ್ಛಿಸುವ ದಾನಿಗಳು ಕರ್ನಾಟಕ ರೆಡ್ ಕ್ರಾಸ್ ರಕ್ತನಿಧಿ, ನಂ.26, ರೆಡ್ ಕ್ರಾಸ್ ಭವನ, ಮೊದಲನೇ ಮಹಡಿ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-560 001 ಇಲ್ಲಿಗೆ 9:00 ಗಂಟೆಯಿಂದ ಸಂಜೆ 6:00 ಗಂಟೆಯೊಳಗಾಗಿ ಭೇಟಿ ನೀಡಬಹುದು. ಯಾರಾದರೂ ರಕ್ತದಾನ ಶಿಬಿರ ಆಯೋಜಿಸಲು ಇಚ್ಚಿಸಿದಲ್ಲಿ ರಕ್ತದಾನಿ ಗಳಿಗಿಂತ ಹೆಚ್ಚಿದ್ದಲ್ಲಿ (20 ರಕ್ತದಾನಿಗಳಿಗಿಂತ ಹೆಚ್ಚಿದ್ದಲ್ಲಿ) ಅದಕ್ಕೂ ನೆರವು ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ, ಕರ್ನಾಟಕ ರೆಡ್ ಕ್ರಾಸ್ ರಕ್ತನಿಧಿ, ನಂ.26, ರೆಡ್ ಕ್ರಾಸ್ ಭವನ, ಮೊದಲನೇ ಮಹಡಿ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-560 001, 080-22268435 / 9035068435 / 9902859859 / 999980537678. ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.